ಮಟ್ಟದಲ್ಲಿಯೇ ಕೊಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಮಾಡುತ್ತೇನೆ.

ಶ್ರೀ ಎಂ.ಪಿ. ಕೇಶವಮೂರ್ತಿ : ಮಾನ್ಯ ಅಧ್ಯಕ್ಷರೇ ಈ ಭೂಸ್ವಾಧೀನಕ್ಕಾಗಿ ನಾವು ಹಣವನ್ನು ಮೊದಲೇ ಬಿಡುಗಡೆ ಮಾಡಿದ್ದೇವೆ ಆದರೆ ಹಣ ಕೊಡುವುದು ಸ್ವಲ್ಪ ವಿಳಂಬವಾಗಿರುವುದರಿಂದ ಅದಕ್ಕೆ ಬಡ್ಡಿಯನ್ನು ಸೇರಿಸಿ ಕೊಡಬೇಕಾಗಿದೆ. ಕಾರಣ ನಾನು ಈಗಾಗಲೇ ಹೇಳಿದ ಪ್ರಕಾರ ಭೂಸ್ವಾಧೀನಾಧಿಕಾರಿಗಳು ನಮಗೆ 4(1) ನೋಟಿಫಿಕೇಶನ್ ಮಾಡಿಕೊಡಬೇಕಾದರೆ 7 ವರ್ಷಗಳು ತೆಗೆದುಕೊಂಡಿದ್ದರ ಪ್ರಯುಕ್ತ ನಾವು ಇವತ್ತು ಇಷ್ಟೊಂದು ಬಡ್ಡಿ ಕೊಡಬೇಕಾಗಿದೆ. ನಮ್ಮ ಇಲಾಖಾವತಿಯಿಂದ ಯಾವುದೂ ಡಿಲೇ ಆಗಿರಲಿಲ್ಲ. ಕಂದಾಯ ಇಲಾಖೆಯಿಂದ ಡಿಲೇ ಆಗಿರುವುದರಿಂದ ಅವರು ಏಕೆ ಈ ರೀತಿ ಡಿಲೇ ಮಾಡಿದರು ಎನ್ನುವ ಬಗ್ಗೆ ವಿಚಾರಣೆ ಮಾಡುತ್ತೇವೆ. ಈಗ ಅವರಿಗೆ ಹಣ ಪಾವತಿ ಮಾಡಲಿಕ್ಕೆ ಎಕ್ಸಿಕ್ಯೂಟೀವ್ ಇಂಜಿನೀಯರ್‌ರಿಂದ ಅಟೆಸ್ಟ್ ಆಗಿ ಬಂದ ಕೂಡಲೇ ನಾವು ಹಣ ಬಿಡುಗಡೆ ಮಾಡುತ್ತೇವೆ.

ಶ್ರೀ ಡಿ.ಕೆ. ಶಿವಕುಮಾರ್ : ಎಷ್ಟು ದಿವಸಗಳಲ್ಲಿ ಕೊಡುತ್ತೀರಿ. ಈಗಾಗಲೇ 30 ವರ್ಷಗಳು ಆಗಿದೆ ಇನ್ನು ಯಾವಾಗ ನೀವು ಕೊಡುವುದು? 15 ದಿವಸಗಳಲ್ಲಿ ಕೊಡುತ್ತೇವೆ ಇಲ್ಲ ಒಂದು ತಿಂಗಳಲ್ಲಿ ಕೊಡುತ್ತೇವೆಂದು ಹೇಳಿ. ನೀವು ಹಣ ಕೊಡುವಷ್ಟರಲ್ಲಿ ಎಲ್ಲಾ ಸತ್ತು ಹೋಗುತ್ತಾರೆ ಈಗ ಅರ್ಧ ಜನ ಸತ್ತು ಹೋಗಿದ್ದಾರೆ .

ವಿಷಯ : ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕು ತೋವಿನ ಕೆರೆಯಲ್ಲಿ ಉಪ ವಿದ್ಯುತ್ ಕೇಂದ್ರ ಸ್ಥಾಪನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 145 (728)

ಶ್ರೀ ಆರ್. ನಾರಾಯಣ್ (ಬೆಳ್ಳಾವಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕ್ ತೋವಿನಕೆರೆಯಲ್ಲಿ 66:11 ಕೆವಿ ವಿದ್ಯುತ್ ಉಪಕೇಂದ್ರ ಸ್ಥಾಪಿಸಲು ಅಗತ್ಯವಿರುವ ಮಾಹಿತಿಗಳನ್ನು ಸಂಗ್ರಹಿಸಲಾಗಿದೆಯೇ?

ಆ) ಮಾಹಿತಿಗಳನ್ನು ಸಂಗ್ರಹಿಸಿದಲ್ಲಿ ತಾಂತ್ರಿಕ ಸಮಿತಿಯ ಒಪ್ಪಿಗೆಯನ್ನು ಪಡೆಯಲಾಗಿದೆಯೇ?

ಇ) ತಾಂತ್ರಿಕ ಸಮಿತಿಯ ಒಪ್ಪಿಗೆ ಪಡೆದಿದ್ದಲ್ಲಿ ಉಪಕೇಂದ್ರವನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ.ವಿ. ಮುನಿಯಪ್ಪ (ಇಂಧನ ರಾಜ್ಯ ಸಚಿವರು) :

ಅ) ಹೌದು.

ಆ) ಹೌದು.

೩) ಇದರ ಬಗ್ಗೆ ವಿವರವಾದ ಯೋಜನಾ ವರದಿಯನ್ನು ತಯಾರಿಸಬೇಕಾಗಿದೆ. ವಿವರವಾದ ಯೋಜನಾ ವರದಿಗೆ ಮಂಡಳಿಯ ಆಡಳಿತಾತ್ಮಕ ಮಂಜೂರಾತಿ ದೊರೆತ ನಂತರ ನಿರ್ಮಾಣ ಕಾರ್ಯವನ್ನು ಕೈಗೊಳ್ಳಲಾಗುವುದು.

ಶ್ರೀ ಆರ್. ನಾರಾಯಣ್ : ಮಾನ್ಯ ಅಧ್ಯಕ್ಷರೇ, ಉತ್ತರದಿಂದ ನನಗೆ ಸ್ವಲ್ಪ ಸಮಾಧಾನ ಆಗಿದೆ. ನಾನು ಕಳೆದ 3 ವರ್ಷಗಳಿಂದ ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಒಂದು ಉಪ ಕೇಂದ್ರವನ್ನು ಸ್ಥಾಪನೆ ಮಾಡಬೇಕೆಂದು ಒತ್ತಾಯ ತಂದರೂ ಅದರ ಪ್ರಾಜೆಕ್ಟ್‌ರಿಪೋರ್ಟ್ ಎಲ್ಲಾ ತರಿಸಿದ್ದಾರೆ ಕಳೆದ ತಿಂಗಳಲ್ಲಿ ಅದಕ್ಕೆ ತಾಂತ್ರಿಕ ಮಂಜೂರಾತಿ ಕೊಟ್ಟಿದ್ದಾರೆ. ವಿವರವಾದ ಯೋಜನೆಯನ್ನು ತಯಾರು ಮಾಡಿ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟು ಕ್ರಮ ಕೈಗೊಳ್ಳುತ್ತೇನೆಂದು ಹೇಳಿರುವುದರಿಂದ ಆದಷ್ಟು ಬೇಗ ಅಕ್ಟೋಬರ್ ತಿಂಗಳಲ್ಲೇ ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟು ನಮಗೆ ಸಂಪೂರ್ಣ ಸಮಾಧಾನ ಮಾಡಬೇಕೆಂದು ನಾನು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

ಶ್ರೀ ಎಸ್.ಎಂ ಕೃಷ್ಣ : ಮಾನ್ಯ ಅಧ್ಯಕ್ಷರೇ, ಅವರ ಕೋರಿಕೆಯನ್ನು ಗಮನಿಸಲಾಗಿದೆ ನವೆಂಬರ್ ಡಿಸೆಂಬರ್‌ನಲ್ಲಿ ಮಾಡುತ್ತೇವೆ .

ವಿಷಯ : ಹಿರೇಕೆರೂರು ತಾಲ್ಲೂಕಿನ ಕೆರೆಗಳನ್ನು ನವೀಕರಿಸುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 150 (423)

ಶ್ರೀ ಬಿ. ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

(ಅ) ಧಾರವಾಡ ಜಿಲ್ಲಾ ಹಿರೇಕೆರೂರು ತಾಲ್ಲೂಕು ಮದಗಮಾಸೂರು ಕೆರೆ ಹಾಗೂ ಕಾಲುವೆಗಳು ಪುರಾತನ ಕಾಲದವುಗಳಾಗಿದ್ದು ಅವುಗಳನ್ನು ನವೀಕರಿಸುವ ಬಗ್ಗೆ ರಾಷ್ಟ್ರೀಯ ಜಲ ನಿರ್ವಹಣಾ ಯೋಜನೆಯಲ್ಲಿ (ಎನ್.ಡಬ್ಲ್ಯೂ ಎಂ.ಪಿ.) ಮಂಜೂರಾತಿ ಪಡೆಯಲಾಗಿದೆಯೇ;

(ಆ) ಈ ಕಾಮಗಾರಿಗೆ ತಗಲುವ ಅಂದಾಜು ಮೆಚ್ಚವೆಷ್ಟು : 1994-95ರ ಆಯವ್ಯಯದಲ್ಲಿ ಎಷ್ಟು ಹಣ ಒದಗಿಸಲಾಗಿದೆ;

(೩) ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು;

(ಈ) ಈ ಕಾಮಗಾರಿಯನ್ನು ಕಾರ್ಯಗತ ಮಾಡುವುದರಿಂದ ನವೀಕರಿಸಲ್ಪಡುವ ಬಲ ಮತ್ತು ಎಡದಂಡೆ ಕಾಲುವೆಗಳ ಉದ್ದಳತೆ ಎಷ್ಟು ;

(ಉ) ಈ ಯೋಜನೆಯಿಂದ ಹೆಚ್ಚುವರಿ ಎಷ್ಟು ಎಕರೆ ಕ್ಷೇತ್ರಕ್ಕೆ ನೀರೊದಗಿಸಲು ಉದ್ದೇಶಿಸಲಾಗಿದೆ?